ಕರ್ನಾಟಕ ಸರ್ಕಾರ

ಖಜಾನೆ ಇಲಾಖೆ

ಖಜಾನೆ ನಿರ್ದೇಶಕರ ಕಾರ್ಯಾಲಯ, ಡಾ:ಅಂಬೇಡ್ಕರ್ ವೀಧಿ, ವಿ.ವಿ.ಗೋಪುರ, ಬೆಂಗಳೂರು-**560001**.

ಸಂ:ಖನಿ/ಸಿಬ್ಬಂದಿ(5)/ಸಿಆರ್38/2016-17 ದಿನಾಂಕ: 29.11.2017

# ಸುತ್ತೋಲೆ

ವಿಷಯ:- ಖಜಾನೆ ಇಲಾಖೆಯ 'ಬಿ' ಮತ್ತು 'ಸಿ' ವೃಂದದ 1978 ರಿಂದ 2016 ರವರೆಗಿನ ತಾತ್ಕಾಲಿಕ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ವೀಕ್ಷಿಸಿ, ಆಕ್ಷೇಪಣೆಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 15.11.2017,
2) ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 27.11.2017.

*****

ಉಲ್ಲೇಖಿತ ಅಧಿಸೂಚನೆಗಳಲ್ಲಿ, ಖಜಾನೆ ಇಲಾಖೆಯ 'ಬಿ' ಮತ್ತು 'ಸಿ' ವೃಂದದ 1978 ರಿಂದ 2016 ರವರೆಗಿನ ತಾತ್ಕಾಲಿಕ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಆಕ್ಷೇಪಣೆಗಳನ್ನು ಸಲ್ಲಿಸಲು ಉಲ್ಲೇಖ (1)ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ದಿ:30.11.2017 ಮತ್ತು ಉಲ್ಲೇಖ (2)ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ದಿ:07.12.2017ನ್ನು ಅಂತಿಮ ದಿನಾಂಕಗಳನ್ನಾಗಿ ನಿಗಧಿಪಡಿಸಲಾಗಿದೆ.

ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಶೀಘ್ರದಲ್ಲಿ ಪ್ರಕಟಿಸಬೇಕಾಗಿರುವುದರಿಂದ, ಉಲ್ಲೇಖ (1)ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ಸಂಬಂಧಿಸಿದಂತೆ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು, ದಿ:04.12.2017 ಮತ್ತು ಉಲ್ಲೇಖ (2)ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ದಿ: 08.12.2017ರೊಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವ ಅಥವಾ ನಿಗಧಿತ ದಿನಾಂಕಗಳಂದು ಖುದ್ದು ನಿರ್ದೇಶನಾಲಯಕ್ಕೆ ಸಲ್ಲಿಸುವ ಕ್ರಮ ಕೈಗೊಳ್ಳುವುದು, ಅವಧಿಮೀರಿ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಖಜಾನೆ ನಿರ್ದೇಶಕರು,
ಬೆಂಗಳೂರು.

ಪ್ರತಿಯನ್ನು:

1) ರಾಜ್ಯದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ.
2) ಉಪ ನಿರ್ದೇಶಕರು, ಖಜಾನೆ ಗಣಕಜಾಲ ಕೇಂದ್ರ, ಬೆಂಗಳೂರು ಇವರಿಗೆ, ಗಣಕ ಜಾಲದಲ್ಲಿ ಪ್ರಕಟಿಸಲು.
3) ಕಡತಕ್ಕೆ/ಅಧಿಕ ಪ್ರತಿ.